ಕೆ. ಇ. ಬಿ. ಬಹಳ ತಡ ಮಾಡಿದೆ. ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅದಕ್ಕೆ ಪರಿಹಾರ ಕೊಡಬೇಕು. ಇಡೀ ಬಿಜಾಪುರ ಜಿಲ್ಲೆಯಲ್ಲಿ ಕಳೆದ ೮-೧೦ ದಿವಸಗಳಿಂದ ಲೋಡ್ ಶೆಡ್ಡಿಂಗ್ ಬಹಳವಾಗುತ್ತಿದೆ. ಮೊದಲು ಲೋಡ್ ಶೆಡ್ಡಿಂಗ್ ಮಾಡುವುದಿಲ್ಲವೆಂದು ಹೇಳಿದರು. ಆದರೆ ಇತ್ತೀಚೆಗೆ ದರ್ಶನಾಪುರ್ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟು ಲೋಡ್ ಶೆಡ್ಡಿಂಗ್ ಅನಿವಾರ್ಯವಾಗಿ ಮಾಡಬೇಕೆಂದು ಹೇಳಿದರು. ಆದುದರಿಂದ ಲೋಡ್ ಶೆಡ್ಡಿಂಗ್ ಮಾಡಿರುವುದರಿಂದ ಕುಡಿಯುವ ನೀರಿಗೂ ೬-೬ ದಿವಸಗಳಿಗೊಮ್ಮೆ ಬಿಜಾಪುರದಲ್ಲಿ ನೀರು ಬರುತ್ತಿದೆ. ಇದರಿಂದ ಐ.ಪಿ. ಸೆಟ್‌ಗೆ ಹಾಗೂ ಕುಡಿಯುವ ನೀರಿಗೆ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿದೆ. ಸಾಯಂಕಾಲ ೬ ರಿಂದ ೧೦ ಗಂಟೆಯವರೆಗೆ ಮಾಡುವುದರಿಂದ ಓದುವುದಕ್ಕೆ ತುಂಬಾ ತೊಂದರೆಯಾಗಿದೆ. ಕೊನೇಪಕ್ಷ ಏಪ್ರಿಲ್‌ವರೆಗಾದರೂ ತಾವು ಲೋಡ್ ಶೆಡ್ಡಿಂಗ್ ತಾವು ಬಂದ್ ಮಾಡಿ ಎಗ್ಸಾಮ್ ಮುಗಿದ ಮೇಲೆ ಶುರು ಮಾಡಬಹುದೆಂದು ತಮ್ಮ ಮೂಲಕ ದರ್ಶನಾಪುರ್‌ರವರನ್ನು ಗಮನ ಸೆಳೆಯುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಾನಂದ ಪಾಟೀಲ್ ಅವರು ಏನು ಮಮದಾಪುರ ವಿಚಾರವಾಗಿ ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ. ಅದಕ್ಕೆ ಸಂಬಂಧಪಟ್ಟ ಫೈಲ್ ಮೊನ್ನೆ ಬೆಳಗಾಂಗೆ ಹೋದಾಗಲೆ ಚೀಫ್ ಇಂಜಿನಿಯರು ಫೈಲ್ ತೆಗೆದುಕೊಂಡು ಹುಬ್ಬಳ್ಳಿಗೆ ಹೋಗಿದ್ದಾರೆ. ಇವತ್ತು ಇಲ್ಲಿಗೆ ಬಂದತಕ್ಷಣ ನಾಳೆ ಮಂಜೂರಾತಿ ಕಳುಹಿಸಿ ಇನ್ನು ೨-೩ ದಿವಸದಲ್ಲಿ ಹಣ ಸಂದಾಯ ಮಾಡುವ ವ್ಯವಸ್ಥೆ ಮಾಡಿಕೊಡುತ್ತೇನೆ. ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಈಗಾಗಲೇ ಎಕ್ಸಿಕ್ಯುಟೀವ್ ಇಂಜಿನಿಯರ್ ಜೊತೆಯಲ್ಲಿ ಮಾತನಾಡಿದ್ದೇನೆ. ನೀರು ಸರಬರಾಜಿಗೆ ಏನು ಬೇಕು ಅದಕ್ಕೆ ಅಲ್ಟರ್ನೇಟೀವ್ ಅರೇಂಜ್‌ಮೆಂಟ್ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವ ರೀತಿಯಲ್ಲಿ ವ್ಯವಸ್ಥೆ ಕೂಡ ಮಾಡಿ ಕೊಡುತ್ತಾರೆಂದು ತಮ್ಮ ಮೂಲಕ ಹೇಳುತ್ತೇನೆ.

(ಒ) ಸಂಯುಕ್ತ ಕರ್ನಾಟಕದಲ್ಲಿ ಶಾಸಕರ ಬಗ್ಗೆ ವರದಿಯಾಗಿರುವ ಹೇಳಿಕೆ

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಇವತ್ತಿನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ 'ಶಾಲಾ ಮಕ್ಕಳಿಗೂ ಕಡೆಯಾಗಿರುವ ಶಾಸಕರು' ಎಂದು ಹೆಡ್ಡಿಂಗ್ ಹಾಕಿ ರಮೇಶ್ ಕುಮಾರ್ ವಿಷಾದ ಎಂದು ಹೇಳಿದ್ದಾರೆ. ಅದರಲ್ಲಿ ಪ್ರಾರಂಭವಾಗಿರುವುದು ಹೇಗೆಂದರೆ 'ತಮ್ಮ ಮೂಲ ಜವಾಬ್ದಾರಿಯನ್ನು ಮರೆತಿರುವ ಶಾಸಕರು ಶಾಲಾ ಮಕ್ಕಳಿಗಿಂತ ಕಡೆಯಾಗಿ ವಿಧಾನಸಭೆಯಲ್ಲಿ ನಡೆದುಕೊಳ್ಳುತ್ತಿರುವುದಕ್ಕೆ ವಿಧಾನ ಸಭಾಧ್ಯಕ್ಷರು ವಿಷಾದ ವ್ಯಕ್ತಪಡಿಸಿದರು. ಈ ಹೇಳಿಕೆ ಬಹುತೇಕ ಸರಿಯಾಗಿ ಕೋಟ್ ಆಗಿಲ್ಲವೆಂದು ಅಂದು ಕೊಂಡಿದ್ದೇನೆ. ತಮ್ಮ ಭಾವನೆ ಕೂಡ ಅದು ಆಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಕೆಲವೊಂದು ಸಮಯದಲ್ಲಿ ಕೆಲವರ ಬಗ್ಗೆ ಮಾತನಾಡಿದ್ದರೆ ಎಂದು ಹೇಳಿ ಬಂದಿದೆ. ಆದರೆ ಎಲ್ಲಿ ತಮ್ಮ ಮೂಲ ಜವಾಬ್ದಾರಿಯನ್ನು ಮರೆತು ಶಾಸಕರು ಶಾಲಾ ಮಕ್ಕಳಿಗಿಂತ ಕಡೆಯಾಗಿ ವಿಧಾನಸಭೆಯಲ್ಲಿ ನಡೆದುಕೊಳ್ಳುತ್ತಾರೆ ವಿಧಾನ ಸಭಾಧ್ಯಕ್ಷರು ಎಂದಿದೆ. ಎಂದರೆ ಎಲ್ಲರೂ ಪ್ರಮಾಣಿಕವಾಗಿ ಇಲ್ಲಿ ಕುಳಿತುಕೊಂಡು ವಿಧಾನ ಸಭೆಯಲ್ಲಿ ಗೌರವಯುತವಾಗಿ ವಿಧಾನ ಸಭೆಯಲ್ಲಿ ನಡೆದುಕೊಳ್ಳತಕ್ಕಂಥ ಶಾಸಕರಿಗೂ ಕೂಡ ಜನ ಇದರ ಬಗ್ಗೆ ವಿಚಾರ ಮಾಡುವುದಕ್ಕೆ ಅವಕಾಶವಾಗುತ್ತದೆ.

ಇವರೂ ಇದೇ ರೀತಿ ನಡೆದುಕೊಳ್ಳುತ್ತಿದ್ದಾರೆ ಎನ್ನುವ ಭಾವನೆ ಬರುತ್ತದೆ. ಮತ್ತೊಂದು ಸ್ಟೇಟ್‌ಮೆಂಟ್ ಇದೆ. 'ಜನರ ಪ್ರತಿನಿಧಿಗಳಿಗೆ ಜವಾಬ್ದಾರಿ ಜನರ ಬದುಕಿಗೆ ಸ್ಪಂಧಿಸುವಂತಹ ಶಾಸನ ರಚನೆ ಮಾಡುವುದಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಾಸನ ರಚನೆ ಕೆಲಸ ಕಡೆಗಣಿಸಲ್ಪಟ್ಟಿರುತ್ತದೆ. ಈ ಕೆಲಸ ಬಿಟ್ಟು ಉಳಿದೆಲ್ಲಾ ಪ್ರಾಮುಖ್ಯತೆ ಪಡೆಯುತ್ತದೆ'. ಇದು ಶಾಸಕರ ತಪ್ಪಿನಿಂದ ಆಗತಕ್ಕಂಥಾದ್ದು ಅಲ್ಲ. ಅನೇಕ ಸಲ ನಾವು ನೋಡುತ್ತೇವೆ. ಅನೇಕ ಸಲ ನಾವು ನೋಡುವುದಂಥಾದ್ದು ಶಾಸನಗಳನ್ನು ಮಂತ್ರಿ ಮಂಡಲದವರು ಕೊನೆಯ ದಿವಸಗಳಲ್ಲಿ ಇಡುತ್ತಾರೆ. ಶಾಸನ ಸಭೆಯು ಗಡಿಬಿಡಿಯಿಂದ ಮುಗಿಯುತ್ತಾ ಇರಬೇಕಾದರೆ ಶಾಸನಗಳನ್ನು ವಿಧಾನ ಸಭೆಯ ಮುಂದೆ ಇಡುತ್ತಾರೆ. ಅದನ್ನು ಪಾಸ್ ಮಾಡುವಂತಹ ಪ್ರಯತ್ನವನ್ನು ಮಾಡುತ್ತಾರೆ. ಶಾಸನಸಭೆಗೆ ನಿಗದಿ ಮಾಡಿದಂತಹ ಮೊದಲ ದಿವಸದಿಂದ ಒಂದೊಂದು ಶಾಸನಗಳನ್ನು ಇಟ್ಟರೆ.....

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್..

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಇದೆಯಾ?

ಶ್ರೀ ಕೆ. ಎನ್. ನಾಗೇಗೌಡ : ಎಲ್ಲಾ ವೇಳೆಯಲ್ಲೂ ಇದೆ. ನಾನು ಏಕೆ ಪಾಯಿಂಟ್ ಆಫ್ ಆರ್ಡರ್ ಏಕೆಂದರೆ ಹೌಸ್ ಪ್ರೊಸೀಡಿಂಗ್ಸ್ ಏನಿದೆ ಅದನ್ನು ಮಂತ್ರಿಗಳು ಸರ್ಕಾರದವರು ಕೆಲವು ಬಿಲ್‌ಗಳನ್ನು ತರಾತುರಿಯಲ್ಲಿ ತಂದು ಪಾಸ್ ಮಾಡಿಕೊಂಡು ಹೋಗುತ್ತಾರೆನ್ನುವಂತಹ ಮಾತು ಪ್ರಿವಿಲೇಜ್ ಆಗುತ್ತದೆ, ಮತ್ತೆ ಪ್ರೊಸೀಡಿಂಗ್ಸ್ ಎಫೆಕ್ಟ್ ಆಗುತ್ತದೆ.

ಅಧ್ಯಕ್ಷರು : ಅದನ್ನು ಕ್ಲಾರಿಫೈ ಮಾಡುತ್ತೇನೆ, ಇದು ಜನರಲ್ ಸ್ಟೇಟ್‌ಮೆಂಟ್.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಹೇಳುವಂಥಾದ್ದು ನೂರು ಪಾಲು ಸರಿಯಾಗಿದೆ. ನೀವು ಅಧಿವೇಶನ ಕೊನೆಯಲ್ಲಿ ಬಿಲ್ ತಂದದ್ದು ಉಂಟು, ರಿಕ್ವೆಸ್ಟ್ ಮಾಡಿಕೊಂಡಿರುವುದು ಉಂಟು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭದಲ್ಲಿ ತರಾತುರಿಯಿಂದ ಬಿಲ್ ಪಾಸ್ ಮಾಡಿಕೊಂಡು ಹೋಗಿರುವುದು ಉಂಟು. ತರಾತುರಿಯಿಂದ ನಿರ್ಣಯವಾಗಿರುವುದು ಉಂಟು. ಇಲ್ಲಿ ಎಷ್ಟು ಜನ ಮಂತ್ರಿಗಳು, ಶಾಸಕರು ಪ್ರಾಮಾಣಿಕವಾಗಿ ಕುಳಿತುಕೊಳ್ಳುತ್ತಿದ್ದಾರೆ. ಅವರು ಈ ಮಾತನ್ನು ಹೇಳಲಿಲ್ಲ. ಈ ಸದನದಲ್ಲಿ ಗಂಟೆ ಬಾರಿಸುತ್ತಾ ಇದ್ದರೂ ಒಂದು ಗಂಟೆಯಾದರೂ ಸದಸ್ಯರು ಬರದೇ ಇರುವಂಥಾದ್ದು ಉಂಟು. ಸದಸ್ಯರುಗಳು ಸಹಿ ಹಾಕಿ ಹೊರಗಡೆ ಹೋಗಿರುವಂಥಾದ್ದು ಉಂಟು. ಇದನ್ನು ಅವರು ಒಪ್ಪಿಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಎಂದರೆ ಪ್ರಾಮಾಣಿಕವಾಗಿ ಹೇಳಲಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ನಾಗೇಗೌಡರು ಪಾಯಿಂಟ್ ಆಫ್ ಎಂದು ಹೇಳಿದ್ದಾರೆ, ಅವರು ವಿಷಯವನ್ನು ಕಂಪ್ಲೀಟ್ ಮಾಡಲಿ. He has to explain it to me. Please permit him.

(ಗೊಂದಲ)

MR. SPEAKER : He must have his say. You cannot obstruct him.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ೧೨ ಜನ ಮಂತ್ರಿಗಳ ಕಾಗದ ಪತ್ರಗಳನ್ನು ಒಬ್ಬರೇ ಮಂತ್ರಿ ಮಂಡಿಸುತ್ತಾರೆ.

ಅಧ್ಯಕ್ಷರು : ಯಾವ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿರುತ್ತಾರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟು, ನಂತರ ಅವರಿಗೆ ನಾನು ತೀರ್ಮಾನವನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಡಾ: ಎಂ. ಪಿ. ಕರ್ಕಿಯವರು ಮಾತನಾಡುವಂತಹ ಸಂದರ್ಭದಲ್ಲಿ ಹೌಸ್ ಪ್ರೊಸೀಡಿಂಗ್ಸ್ ಮೇಲೆ ಮಾತನಾಡಿದರು. ಸ್ಪೆಸಿಫಿಕ್ ಆಗಿ ಬಿಲ್ ಬಂದಂತಹ ಕಾಲದಲ್ಲಿ ಅದು ಡಿಲೇ ಆಗಿದ್ದರೆ, ಬಿಲ್ ಕೊಡದೇ ಇದ್ದರೆ ಅಥವಾ ಆ ಮಿನಿಸ್ಟರ್ ಇಲ್ಲದೇ ಇದ್ದರೆ, ಆ ಟೈಮ್‌ನಲ್ಲಿ ಅವರು ಕೇಳುವಂಥಾದ್ದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಆಲ್‌ರೆಡಿ ಪ್ರೊಸೀಡಿಂಗ್ಸ್ ಆಗಿ ಹೋಗಿದೆ. ಆ ಪ್ರೊಸೀಡಿಂಗ್ಸ್ ಮೇಲೆ ಮಂತ್ರಿಗಳು ಬರದೇ ಹೀಗೆ ಆಗಿಲ್ಲವೆಂದು ತಿರುಚಿ ಮಾತನಾಡಿದರೆ ಅದಕ್ಕೆ ತಾವು ಏನು ಹೇಳಿದ್ದೀರಿ ಅದಕ್ಕೆ ಕ್ಲಾರಿಫಿಕೇಷನ್ ಸಿಗುವುದಿಲ್ಲ. ಆಗ ಮಂತ್ರಿಗಳ ಮೇಲೆ ಸರ್ಕಾರದ ಮೇಲೆ ಆರೋಪ ಮಾಡಿದ ಹಾಗೆ ಆಗುತ್ತದೆ. ಅದು ನನ್ನ ಪಾಯಿಂಟ್ ಆಫ್ ಆರ್ಡರ್ ಆಗಿದೆ. He should correct before raising the issue.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಮಾನ್ಯ ಅಧ್ಯಕ್ಷರೆ, ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಅಂತಹ ಸ್ಥಿತಿ ಏಕೆ ನಿರ್ಮಾಣವಾಗಿದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಬಿಲ್ ಪಾಸ್ ಮಾಡುವಂತಹ ಸಂದರ್ಭದಲ್ಲಿ ಆ ಪರಿಸ್ಥಿತಿ ಹೇಗೆ ನಿರ್ಮಾಣ ಆಯಿತು. ಆ ಪರಿಸ್ಥಿತಿ ನಿರ್ಮಾಣ ಮಾಡಿದಂಥವರು ಯಾರು ಎನ್ನುವುದನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅದನ್ನು ನಾನು ಕ್ಲಾರಿಫೈ ಮಾಡುತ್ತೇನೆ. Please do not enter into arguments.

ಶ್ರೀ ಜಿ.ವಿ. ಶ್ರೀರಾಂ ರೆಡ್ಡಿ : ನಾವು ಹೌಸ್ ಪ್ರೊಸೀಡಿಂಗ್ಸ್ ಕಾಮೆಂಟ್ಸ್ ಮಾಡುತ್ತಿಲ್ಲ.

ಅಧ್ಯಕ್ಷರು : ಡಾ॥ ಎಂ. ಪಿ. ಕರ್ಕಿಯವರೇ, ತಾವು ಪ್ರಸ್ತಾಪ ಮಾಡಿರುವಂತಹ ವಿಷಯವನ್ನು ಮುಗಿಸಿ, ನಿಮಗೆ ನಾನು ಕ್ಲಾರಿಫೈ ಮಾಡುತ್ತೇನೆ.

ಡಾ॥ ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ತಾವು ಆ ರೀತಿಯಾಗಿ ಹೇಳಿರಲಿಕ್ಕಿಲ್ಲ. ಈ ಪತ್ರಿಕೆಯಲ್ಲಿ ಬಂದಿರುವಂಥಾದ್ದು ಶಾಸನ ರಚನೆ ಜನ ಪ್ರತಿನಿಧಿಗಳ ಜವಾಬ್ದಾರಿ ಜನರ ಬದುಕಿಗೆ ಶಾಸನ ರಚನೆ

ಮಾಡುವುದು ಆಗಿದೆ. ಆದರೆ ಇತ್ತೀಚಿನ ದಿವಸಗಳಲ್ಲಿ ಶಾಸನ ರಚನೆ ಮಾಡುವುದು ಆಗಿದೆ. ಆದರೆ ಇತ್ತೀಚಿನ ದಿವಸಗಳಲ್ಲಿ ಶಾಸನ ರಚನೆ ಕೆಲಸ ಕಡೆಯ ಪಟ್ಟಿಯಲ್ಲಿರುತ್ತದೆಂದು ತಾವು ಹೇಳಿದಂಥಾದ್ದು ಸರಿ. ಅದು ಅಧಿವೇಶನದ ಕೊನೆಯಲ್ಲಿರುತ್ತದೆ. ಇಲ್ಲಿ ನಾನು ಯಾರನ್ನೂ ಬ್ಲೇಮ್ ಮಾಡುತ್ತಿಲ್ಲ. ನನ್ನ ನಾಲ್ಕುವರೆ ವರ್ಷಗಳ ಅನುಭವವನ್ನು ಹೇಳಬೇಕೆಂದರೆ ಶಾಸನ ರಚನೆ ಅಧಿವೇಶನದ ಕೊನೆಯ ಒಂದೆರಡು ದಿವಸಗಳಲ್ಲಿ ಇರುತ್ತದೆ. ಶಾಸನ ರಚನೆ ಮಾಡಬೇಕೆಂದರೆ ಸರಿಯಾದ ರೀತಿಯಲ್ಲಿ ಚರ್ಚೆಯಾಗಬೇಕು, ನಾನು ಹೇಳುವುದೇನೆಂದರೆ ಮೊದಲು ಒಂದೆರಡು ದಿವಸಗಳು ಚರ್ಚೆಗೆ ಅವಕಾಶ ಕೊಡಬೇಕು, ಎಲ್ಲಾ ಶಾಸನಗಳನ್ನು ಒಂದೇ ದಿವಸ ತಂದು ಪಾಸ್ ಮಾಡುವಂಥಾದ್ದು ಸರಿಯಲ್ಲ. ಮೊದಲ ದಿವಸವೇ ಶಾಸನ ರಚನೆ ಪ್ರಾರಂಭ ಮಾಡಲಿ ಇದು ಕೂಲಂಕುಷವಾಗಿ ಚರ್ಚೆ ಆಗುವಂಥಾದ್ದಕ್ಕೆ ಅವಕಾಶ ಮಾಡಬೇಗುತ್ತದೆ. ಇದು ಶಾಸಕರ ತಪ್ಪು ಅಲ್ಲ, ಸರ್ಕಾರದವರಿಗೂ ಅನ್ವಯವಾಗುತ್ತದೆ. ಇದನ್ನು ಅವರು ತಿದ್ದಿಕೊಳ್ಳಬೇಕಾಗುತ್ತದೆ. ಆ ಒಂದು ಅರ್ಥದಲ್ಲಿ ತಾವು ಹೇಳಿದ್ದೀರಿ, ಶಾಸಕರಿಗೆಲ್ಲಾ ಹೇಳಿಲ್ಲವೆನ್ನುವಂತಹ ಮಾತು ಎಂದು ನನಗನಿಸಿದೆ.

ಅಧ್ಯಕ್ಷರು : ನಾನು ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ನಿಮ್ಮ ಕೊಠಡಿಗೆ ಬಂದು ಈ ವಿಷಯ ಪ್ರಸ್ತಾಪ ಮಾಡಿದೆ. ಆದರಲ್ಲಿ ಇನ್ನೊಂದು ವಿಷಯ ಬಂದಿರುವಂಥಾದ್ದು. ವಿಧಾನ ಮಂಡಲದ ಅಧಿವೇಶನ ನಡೆಯುವಾಗ ಕೆಲವು ಶಾಸಕರು ೩-೪ ದಿವಸಗಳ ಭತ್ಯೆಯನ್ನು ಪಡೆಯುವುದಕ್ಕಾಗಿ ಒಮ್ಮೆಲೆ ಸಹಿ ಹಾಕಿ ಪಡೆಯುತ್ತಾರೆಂದು ಬಂದಿದೆ. ಅಧ್ಯಕ್ಷರೆ, ಇದು ಒಂದು ರೀತಿಯಲ್ಲಿ ಡಾ: ಎಂ.ಪಿ. ಕರ್ಕಿಯವರು ಹೇಳಿದ ಹಾಗೆ ಕೆಲವು ಶಾಸಕರು, ಯಾವುದೋ ಶಾಸಕರು ಎಂದು ಹೇಳಿದಾಗ ಅದು ಯಾವ ಶಾಸಕರು ಎಂದು ಹೇಳಿ, ಇಲ್ಲದಿದ್ದರೆ ಇದು ಎಲ್ಲಾ ಸಚಿವರಿಗೂ ಅನ್ವಯವಾಗುತ್ತದೆಂದು ಕ್ರಿಮಿನಲ್ ಕೇಸ್ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಸಚಿವರು ಕೇಳಿದರು. ಎಲ್ಲರ ಮೇಲೂ ಗೂಬೆ ಕೂರಿಸಿದ ಹಾಗೆ ಆಗುತ್ತದೆಂದು ಎಲ್ಲರೂ ನಮ್ಮ ಮೇಲೆ ಮುಗಿಬಿದ್ದರು. ತಾವು ದಯಮಾಡಿ ಕ್ಷಮಿಸಿ ಎಲ್ಲೋ ನಮ್ಮ ಪದ್ಧತಿಯಲ್ಲಿ ಲೋಪವಿದೆ. ಒಟ್ಟಿಗೆ ಸಹಿ ಹಾಕುವಂಥಾದ್ದಕ್ಕೆ ಬಿಡತಕ್ಕಂಥವರು ಯಾರು? ಅಂತಹ ಅವಕಾಶವನ್ನು ಕಲ್ಪಿಸಿರುವಂಥವರು ಯಾರು? ಈ ವಿಷಯವನ್ನು ನಾನು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ. ಎರಡನೆಯದಾಗಿ, ಡಾ: ಎಂ.ಪಿ. ಕರ್ಕಿಯವರು ಹೇಳಿದ ಹಾಗೆ ಕೆಲವರು ಶಾಸಕರು ಎಂದು ಹೇಳಿದ್ದೀರಿ. ಇಲ್ಲಿ ಬೆಳಿಗ್ಗೆ ಬೆಲ್ ಹಾಕಿದಾಗ ನಾವು ಇಲ್ಲಿದ್ದು ಕಲಾಪಗಳು ಪ್ರಾರಂಭವಾದ ಮೇಲೆ ಹೊರಗಡೆ ಹೋಗುತ್ತೇವೆ. ನಮಗೆ ಬುದ್ಧಿ ಶಕ್ತಿ ಇರುವ ಹಾಗೆ ಪ್ರಮಾಣಿಕವಾಗಿ ಚರ್ಚೆಯಲ್ಲಿ ಭಾಗಿಯಾಗುತ್ತೇವೆ. ನಾನು ಮತ್ತೊಂದು ವಿಚಾರವನ್ನು ಮಾನ್ಯ ಎಂ.ಸಿ. ನಾಣಯ್ಯನವರ ಗಮನಕ್ಕೆ ತರುವುದೇನೆಂದರೆ ಶಾಸನಗಳ ರಚನೆಯನ್ನು ಅಧಿವೇಶನದ ಕೊನೆಯ ದಿವಸದಲ್ಲಿ ತರುತ್ತೀರಿ. ಆ ದಿವಸ ನಿಮ್ಮ ಬುದ್ಧಿ ಫ್ರೌಡಿಮೆಯಿಂದ ನಮ್ಮ ಬಾಯಿಯನ್ನು ಮುಚ್ಚಿಸುವಂತಹ ಪ್ರಯತ್ನವನ್ನು ಕೂಡ ಮಾಡುತ್ತೀರಿ, ಹೀಗೆ ಕಾರ್ಪೊರೇಷನ್ ಬಗ್ಗೆ ಅಪೀಲ್ ಕಮಿಟಿ ಎಂದು ಬಂತು. ಆಗ ನಾವು ಆ ಕಮಿಟಿ ಬೇಡವೆಂದು ಗಿಣಿಗೆ ಹೇಳಿದ ಹಾಗೆ ಹೇಳಿದೆವು. ಇದರಿಂದ ಬಹಳ ಗೊಂದಲವಾಗುತ್ತದೆಂದು ಸಹ ಹೇಳಿದೆವು. ಇವತ್ತು ನೀವು ನಗರಪಾಲಿಕೆಯನ್ನು ಹೋಗಿ ನೋಡಿ. ನಿಮಗೆ ನಮ್ಮ ಮಾತನ್ನು ಕೇಳುವಂತಹ ವ್ಯವಧಾನವೂ ಇರಲಿಲ್ಲ. ಇವತ್ತು ಮುಗಿಸಿಬಿಡಬೇಕೆಂದು ಹೇಳಿದ್ದೀರಿ, ಕಾರ್ಪೊರೇಷನ್ ಅನ್ನು ಇವತ್ತು ಮುಗಿಸಿಬಿಟ್ಟಿರಿ. ನೀವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಹೆಚ್ಚು ಅವಕಾಶವನ್ನು

ಕೊಡುವುದಿಲ್ಲ. ನಮ್ಮ ಅಳಲನ್ನು ಕೇಳುವಂಥಾದ್ದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಅದಕ್ಕೋಸ್ಕರ ತಾವು ತಮ್ಮ ಭಾವನೆಯನ್ನು ಇಡೀ ರಾಜ್ಯದ ಜನತೆಗೆ ಇನ್ನೊಂದು ಸಲ ಉಚ್ಚರಿಸಿ ಎಲ್ಲರೂ ಸಾರಸಗಟಾಗಿ ಹಾಗೆ ಅಲ್ಲ. Each and every MLA cannot be brushed with the same paint. ಆ ಒಂದು ಕಳಕಳಿಯಿಂದ ನಾನು ತಮ್ಮಿಂದ ನಿರೀಕ್ಷೆ ಮಾಡುತ್ತೇನೆ.

ಅಧ್ಯಕ್ಷರು : ನಾನು ನಿನ್ನೆ ದಿವಸ ಒಂದು ಸಾರ್ವಜನಿಕ ಸಭೆಯಲ್ಲಿ ಭಾಗ ವಹಿಸಿದಂತಹ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪವಾಯಿತು. ನಾನು ಕರ್ನಾಟಕ ರಾಜ್ಯದ ವಿಧಾನಸಭೆಯನ್ನು ಗಮನದಲ್ಲಿಟ್ಟುಕೊಂಡು ಹೇಳಿಲ್ಲ. ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಹೇಗೆ ಸಂಸ್ಥೆಗಳು ಅಪಮೌಲ್ಯಗೊಂಡಿವೆ, ಅದರ ಮೂಲ ಉದ್ದೇಶ ಹೇಗೆ ವಿಫಲವಾಗಿದೆ, ಆಗುತ್ತಾ ಇದೆ ಎನ್ನುವಂತಹ ಮಾತನ್ನು ಪ್ರಸ್ತಾಪ ಮಾಡುತ್ತಾ ಸಂಸತ್ತನ್ನು ಸೇರಿಸಿಕೊಂಡು ಈ ರಾಷ್ಟ್ರದಲ್ಲಿರುವಂತಹ ಅನೇಕ ವಿಧಾನ ಸಭೆಗಳ ಗತಿ ಯಾವ ಮಟ್ಟಕ್ಕೆ ಬಂದಿದೆ ಎನ್ನುವಂತಹ ಮಾತನ್ನು ಹೇಳುತ್ತಾ ಈ ವಿಚಾರವನ್ನು ಹೇಳಿದೆ, ಹಾಗೆ ಅದೇ ಸಭೆಯಲ್ಲಿ ಇನ್ನೊಂದು ಮಾತನ್ನು ಹೇಳಿದೆ. ನಾನು ಇಲ್ಲಿ ಯಾರನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾತನ್ನು ಹೇಳುವುದಿಲ್ಲ. ನಾನು ಇಂತಿಂಥ ತಪ್ಪುಗಳನ್ನು ಮಾಡುತ್ತಾರೆಂದು ವರ್ಗೀಕರಣ ಮಾಡಿ ಏನು ಹೇಳುತ್ತೇನೆ, ಅದಕ್ಕೆ ಯಾರಾದರೂ ಹೊಂದಿಕೊಂಡು ಅವರು ಮಾಡುವಂತಹ ಕೆಲಸದಲ್ಲಿದ್ದರೆ ಅದಕ್ಕೆ ನಾನು ಅಸಹಾಯಕನೆನ್ನುವಂತಹ ಮಾತನ್ನು ಹೇಳಿದ್ದೇನೆ. ಮತ್ತೆ ಈ ಸದನದಲ್ಲಿ ತಮಗೆ ಎಲ್ಲರಿಗೂ ನೆನಪು ಇರಬಹುದು. ಇಲ್ಲಿ ನಾನು ಆ ಪಕ್ಷ, ಈ ಪಕ್ಷವೆಂದು ನೋಡದೆ ಸದಸ್ಯರುಗಳ ಗೈರು ಹಾಜರಿಯನ್ನು ಗಮನಿಸಿ ಹಾಜರಾತಿಯ ಪುಸ್ತಕವನ್ನು ತರಿಸಿಕೊಂಡು ಅವರು ಸಹಿ ಹಾಕಿ ಇಲ್ಲಿ ಇಲ್ಲದಿರುವುದನ್ನು ನೋಡಿ ಸಂಬಂಧಪಟ್ಟ ಮುಖಂಡರುಗಳಿಗೆ ತಿಳಿಸಿ ನಿಮ್ಮ ಸದಸ್ಯರುಗಳು ಸಹಿ ಹಾಕಿ ಸದನಕ್ಕೆ ಬಂದಿಲ್ಲವೆಂದೂ, ಆ ಸದಸ್ಯರುಗಳ ರೂಮ್‌ಗಳಿಗೆ ಫೋನ್ ಮಾಡಿ ಅಲ್ಲೂ ಅವರಿಲ್ಲವೆಂದು ತಿಳಿದುಕೊಂಡು ನಂತರ ನಾನು ಸದನದಲ್ಲಿ ಅವರ ಹೆಸರುಗಳನ್ನು ಓದಿದ್ದೇನೆ. ಮತ್ತೆ ಆ ಸದಸ್ಯರುಗಳ ಪಟ್ಟಿಯನ್ನು ಕೊಟ್ಟಿದ್ದೇನೆ. ನಾನು ಒಂದು ಸಲವಲ್ಲ ಹತ್ತು ಸಲ ಹೇಳಿದ್ದೇನೆ. ನಾವು ಅಧಿವೇಶನವನ್ನು ಕರೆಯಲಿಲ್ಲವೆಂದು ಗಲಾಟೆ ಮಾಡಿ ನಂತರ ಅಧಿವೇಶನವನ್ನು ಕರೆದರೆ ೨-೩ ದಿವಸಕ್ಕೆ ಸದಸ್ಯರುಗಳು ಇರುವುದಿಲ್ಲ. ಇವತ್ತು ಬೆಳಿಗ್ಗೆ 10 ಗಂಟೆಗೆ ಅಧಿವೇಶನವೆಂದು ಹೇಳಿದ್ದೆ, ನಾನು ಬೆಳಿಗೆ 9.30 ಗಂಟೆಗೆ ಬಂದೆ, 10.20 ಗಂಟೆಯಾದರೂ ಸದಸ್ಯರುಗಳು ಬಂದಿಲ್ಲ. ನಮ್ಮ ಅಧಿಕಾರಿಗಳಾದ ಶ್ರೀ ಎಸ್. ಬಿ. ಪಾಟೀಲ್‌ರವರು ನನಗೆ 14 15 ಸದಸ್ಯರುಗಳು ಇದ್ದಾರೆಂದು ಹೇಳಿದರು. ಅದಕ್ಕೆ ನಾನು ತಮಾಷೆಯಾಗಿ ಯಾರಾದರೂ ಒಂದಿಬ್ಬರನ್ನು ಸೇರಿಸಿ ಎಂದು ಹೇಳಿದೆ. ಇನ್ನು ಶಾಸನ ರಚನೆಯ ವಿಚಾರ ಇದು ಒಂದು ತತ್ವ, ಶಾಸನಸಭೆಯಲ್ಲಿ ಮತ್ತು ಸಂಸತ್ತಿನಲ್ಲಿ ಶಾಸನ ರಚನೆ ಮೂಲಕ ಕರ್ತವ್ಯವಾಗಿದ್ದು ಅದು ಹಿಂಬದಿಗೆ ಸರಿದಿದೆ. It is a fact borne by evidence. It is not a remark passed against any body. ಈ ವರ್ಗದ ಜನರು ಯಾರಿದ್ದಾರೆ, ಇದು ಕೆಲವರು ಎನ್ನುವಂಥಾದ್ದು ನಾನು ಆಗಲೂ ಸ್ಪಷ್ಟ ಮಾಡಿದ್ದೇನೆ. ಈಗಲೂ ಸ್ಪಷ್ಟ ಮಾಡುತ್ತೇನೆ. ಇದು ನಮ್ಮ ವಿಧಾನಸಭೆಯಲ್ಲಿ ಅಲ್ಲ ರಾಷ್ಟ್ರದ ಎಲ್ಲಾ ಕಡೆಗಳಲ್ಲೂ ಇದು ಹೀಗೆಯೇ ನಡೆದಿದೆ. ಶಾಸನ ಸಭೆಗಳಿಲ್ಲದಿರುವಾಗ ಸಮಿತಿಗಳು ಏನು ನಡೆಯುತ್ತವೆ, ಅಲ್ಲಿ ಸದಸ್ಯರುಗಳು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆನ್ನುವಂಥಾದ್ದೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ನಾವು ಅಲ್ಲಿ ಹೋಗಿ ಅವರಿಗೆ ಸೂಚನೆಯನ್ನು ಕೊಟ್ಟು ಬರುತ್ತೇವೆ. ನಮ್ಮ ಶಾಸಕರು ಇವತ್ತು ಈ ವಿಷಯ ಸಮಿತಿಗಳು ರದ್ದು

ಆಗಿರುವುದರಿಂದ ಎಷ್ಟು ಕಷ್ಟವಾಗಿದೆ ಎಂಬ ಅರಿವು ನನಗಿದೆ. ನಾವು ಬಹಳ ಪ್ರಯಾಸದಿಂದ ಅಸ್ತಿತ್ವಕ್ಕೆ ತಂದಂತಹ ವಿಷಯ ಸಮಿತಿಗಳ ವ್ಯವಸ್ಥೆಯನ್ನು ತೆಗೆದಿದ್ದೇವೆ. ಇದು ಯಾರಿಗೆ ಬೇಕಾಗಿರಲಿಲ್ಲವೋ ಅವರ ಕೈಗೆ ಈ ಅಸ್ತ್ರವನ್ನು ಕೊಟ್ಟಿವು, ಇದು ಸತ್ಯವಲ್ಲವೇ? ಆ ಸತ್ಯ ಕಹಿಯಾಗುತ್ತದೆ. ಆದರ ಯಾವುದೋ ಒಂದು ಸನ್ನಿವೇಶದಲ್ಲಿ ನಾವು ಸತ್ಯವನ್ನು ಹೇಳಲೇ ಬೇಕಾಗುತ್ತದೆ. ವ್ಯವಸ್ಥೆಯಲ್ಲಿ ಲೋಪವಿದೆ ಎನ್ನತಕ್ಕಂಥಾದ್ದು ನಿಜ. ಈ ವ್ಯವಸ್ಥೆಯಲ್ಲಿರತಕ್ಕಂಥ ಲೋಪವನ್ನು ಸರಿಪಡಿಸುವುದಕ್ಕೆ ನನ್ನ ಇತಿಮಿತಿಯಲ್ಲಿ ಬರತಕ್ಕಂಥ ಎಲ್ಲಾ ಪ್ರಯತ್ನದಲ್ಲಿ ನಾನು ಮಾಡಿದ್ದೇನೆ. ಒಂದು ವಿಧಾನಸಭೆ ಅಥವಾ ಒಂದು ಪಕ್ಷವನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳಲಿಲ್ಲ. ಇನ್ನೂ ಅನೇಕ ವಿಚಾರಗಳ ಬಗ್ಗೆ ನಾನು ಹೇಳಿದ್ದುದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ನಾನು ಹೇಳಿರುವ ಎಲ್ಲಾ ವಿಚಾರಗಳಲ್ಲಿ ಪೂರ್ಣವಾಗಿ ನಂಬಿಕೆಯನ್ನು ಇಟ್ಟಿದ್ದೇನೆ, ಅದನ್ನು ಸಮರ್ಥಿಸಿಕೊಳ್ಳುತ್ತೇನೆ. ಅದರಿಂದ ಹಿಂದೆ ಸರಿಯತಕ್ಕಂಥ ಮಾತೇ ಇಲ್ಲ. ಒಳ್ಳೆಯ ಶಾಸಕರು, ಜವಾಬ್ದಾರಿಯಿಂದ ಕಾರ್ಯ ನಿರ್ವಹಣೆ ಮಾಡತಕ್ಕಂಥ ಶಾಸಕರೂ ಕೂಡ ನಮ್ಮಲ್ಲಿ ಇರುವುದರಿಂದ ಇದು ಎಲ್ಲಾ ಶಾಸಕರಿಗೆ ಅನ್ವಯಿಸುವುದಿಲ್ಲ ಎನ್ನುವ ಸ್ಪಷ್ಟೀಕರಣವನ್ನು ನಿಮ್ಮ ಸಮಾಧಾನಕ್ಕಾಗಿ, ನನ್ನ ಸಮಾಧಾನಕ್ಕಾಗಿ ಮತ್ತು ಈ ರಾಜ್ಯದ ಜನರಿಗೆ ಸ್ಪಷ್ಟ ಚಿತ್ರಣವನ್ನು ಕೊಡುವ ದೃಷ್ಟಿಯಿಂದ ಮತ್ತೊಮ್ಮೆ ಈ ಸ್ಥಾನದಿಂದ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ನಾನು ಒಂದು ವಿಚಾರವನ್ನು ಕೇಳಿದ್ದೆ.

ಅಧ್ಯಕ್ಷರು : ಅದು ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗುತ್ತದೆ, ಶೂನ್ಯ ವೇಳೆಯಲ್ಲಿ ಬೇಡ. ಸಿಂಧ್ಯಾ ಅವರು ಇದ್ದಾಗ, ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅದನ್ನು ಮೆನ್‌ಷನ್ ಮಾಡಿ.

ಶ್ರೀ ಜಿ.ವಿ. ರಾಜರೆಡ್ಡಿ: ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಕೇವಲ 20 ನಿಮಿಷ ಕೊಡುತ್ತೀರಿ. ಆಗ ಏನು ಮಾತನಾಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಿಂಧ್ಯಾರವರು ಇದ್ದಾರೆ. ಅವರು ಸೂರತ್ಕಲ್ ಘಟನೆಯ ಬಗ್ಗೆ ಹೇಳಿಕೆ ನೀಡಬೇಕಾಗಿತ್ತು.

ಅಧ್ಯಕ್ಷರು : ಹೇಳಿಕೆಯನ್ನು ಮಾಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಡ್ರಗ್ಸ್ ಪರ್ಚೇಸ್ ಬಗ್ಗೆ ಕೇಳಿದ್ದೆ. ಅದಕ್ಕೆ ಉತ್ತರ ಬರಬೇಕಾಗಿದೆ.

ಅಧ್ಯಕ್ಷರು : ಹೆಲ್ತ್ ಮಿನಿಸ್ಟರ್ ಬಂದಿದ್ದಾರೆ. ಅವರನ್ನು ನಾನು ಈಗಾಗಲೇ ಕರೆಸಿ ಮಾತನಾಡಿದ್ದೇನೆ. ಅವರು ಇವತ್ತು ಹೇಳಿಕೆ ಮಾಡುವವರಿದ್ದಾರೆ. ಈಗಾಗಲೇ ಸಮಯ ಸಾಕಷ್ಟು ಹೋಗಿದೆ. ನಾಳೆ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿರುವುದರಿಂದ, ಇವತ್ತು ಒಂದೇ ದಿವಸ ಉಳಿದಿರುವುದರಿಂದ, ವಿವಿಧ ವಿರೋಧ ಪಕ್ಷಗಳ ಎಲ್ಲಾ ಸ್ನೇಹಿತರಿಗೂ ನಾನು ಅವಕಾಶ ಮಾಡಿಕೊಡಬೇಕಾಗುತ್ತದೆ ಮತ್ತು ಇನ್ನೂ ಕೆಲವು ಒಬ್ಬಿಬ್ಬರಿಗೆ ನಾನು ಅವಕಾಶ ಮಾಡಿಕೊಡಬೇಕಾಗುತ್ತದೆ. we will sit for late hours today. ದಯಮಾಡಿ ಸಹಕರಿಸಬೇಕು. ಈಗ ಬೇರೆ ವಿಚಾರಗಳನ್ನು ಪಕ್ಕಕ್ಕಿಡೋಣ. ನಂತರ

ನಂಜೇಗೌಡರು ತಮ್ಮ ಭಾಷಣವನ್ನು ಮುಂದುವರೆಸಬೇಕಾಗಿದೆ. ಬಿ.ಪಿ. ಎಲ್.ಗೆ ಸಂಬಂಧಿಸಿದ ಹೇಳಿಕೆ ಮತ್ತು ಎಲ್ಲವನ್ನೂ ಮುಖ್ಯಮಂತ್ರಿಗಳು ಕೊಡಲು ಸಿದ್ಧರಿದ್ದಾರೆ. ಟೈಂ ಅಡ್ಜಸ್ಟ್ ಮಾಡಿಕೊಂಡು ನಾನು ಮಾಡಿಸಿ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾನು ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದೆ.

ಅಧ್ಯಕ್ಷರು : ನಿಮ್ಮ ಪ್ರಿವಿಲೇಜ್ ಮೋಷನ್ ಬಗ್ಗೆ ಇವತ್ತೊಂದು ದಿವಸ ನನಗೆ ಅವಕಾಶ ಕೊಡಿ. Finally, I will have a word with the Hon. Chief Minister & Law Minister & then take a decision about it.

ಶ್ರೀ ಎನ್. ಯೋಗೀಶ್ ಭಟ್ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಸಮ್ಮತಿ ಕೇಳಿದ್ದೆ.

ಅಧ್ಯಕ್ಷರು : ಅನಾಥಾಶ್ರಮಗಳ ವಿಚಾರವಲ್ಲವೇ? ಅದಕ್ಕೆ ಮಂತ್ರಿಗಳು ಸಮಯ ಕೇಳಿದ್ದಾರೆ, ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನೀವು ಇವತ್ತು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದೀರಿ, ಮೊದಲೇ ಕೊಟ್ಟಿದ್ದರೆ ಅವರು ಉತ್ತರ ತರಿಸಿ ಕೊಡುತ್ತಿದ್ದರು. ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಮೊನ್ನೆ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : ಮೊನ್ನೆ ನೀವು ಆಬ್ಸೆಂಟ್ ಆಗಿದ್ದೀರಿ. ನಾನು ಕರೆದಾಗ ನೀವು ಸದನದಿಂದ ಹೊರಟು ಹೋಗಿದ್ದೀರಿ. ನನಗೂ ನಿಮ್ಮ ಹಾಗೆಯೇ ಬಹಳ ಕೆಲಸಗಳು ಇವೆ, ಆದರೂ ನಾನು ಇರುತ್ತೇನೆ.

ಶ್ರೀ ಅಗರ ಜ್ಞಾನೇಂದ್ರ : ನಾನು ಆಸ್ಪತ್ರೆಗೆ ಹೋಗಿದ್ದೆ. ಆದ್ದರಿಂದ ಇರಲು ಆಗಲಿಲ್ಲ.

ಅಧ್ಯಕ್ಷರು : ಆಯಿತು, ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನ ಪ್ರಸ್ತಾಪಕ್ಕೆ ಉತ್ತರ ಬಂದಿಲ್ಲ. 45 ದಿನಗಳಾಯಿತು.

ಅಧ್ಯಕ್ಷರು : ಆ ಉತ್ತರ ನಾಳೆ ಬರುತ್ತದೆ. ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

(ಅ) ನೈರುತ್ಯ ರೈಲ್ವೆ ವಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಬಗ್ಗೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಯ ಕೊನೆಯಲ್ಲಿ ತಾವು, ನೈರುತ್ಯ ರೈಲ್ವೆ ವಲಯದ ಬಗ್ಗೆ ಕೇಳಿ ಎಂದು ಈಗ ಸದನದಲ್ಲಿ ಹೇಳಿದ್ದೀರಿ. ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಲು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗವಾಗಿ ಹೋಗಿದೆ ಎನ್ನತಕ್ಕಂಥ ಹೇಳಿಕೆಯ ಬಗ್ಗೆ ಒಂದು ರೀತಿಯಾದಂಥ ಗೊಂದಲ ಸೃಷ್ಟಿಯಾಗಿದೆ.